**ಸಾಕ್ಷಿಗೆ ದಿನಾಂಕ : 18-09-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು : ಶ್ರೀ.ಜೆ.ಬಿ.ಎನ್ ವಕೀಲರಿಂದ ಪಿರ್ಯಾದಿ ಪರವಾಗಿ**

1. ನಾನು 12 ತರಗತಿವರೆಗೆ ಕಲಿತ್ತಿದ್ದೇನೆ. ನನಗೆ ಓದಲು - ಬರೆಯಲು ಬರುತ್ತದೆ. ನಾನು ವ್ಯವಸಾಯ ಮಾಡುತ್ತೇನೆ. ಸಾಕ್ಷಿಗೆ ಈಗ ನಿಪಿ-1 ನ್ನು ತೋರಿಸುತ್ತಿದ್ದು ಸದರಿ ಚೆಕ ನಿಮ್ಮ ಖಾತೆಗೆ ಸೇರಿದ್ದು ಎಂದರೆ ಸರಿ. ನಿಪಿ-1(ಎ) ಸಹಿ ನಿಮ್ಮದು ಎಂದರೆ ಸರಿ. ಸದರಿ ನಿಪಿ-1 ಚೆಕ್ಕನ್ನು ಪಿರ್ಯಾದಿದಾರನಿಗೆ ನೀಡಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಪಿರ್ಯಾದಿದಾರನ ಪರಿಚಯ ನಿಮಗೆ ಇದೆ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಪಿರ್ಯಾದಿದಾರನ ಊರಿಗೆ ಮತ್ತು ನಿಮ್ಮ ಊರಿಗೆ ಪಿರ್ಯಾದಿದಾರ ಬರುತ್ತಿದ್ದ ಕಾರಣ ನಿಮ್ಮಿಬ್ಬರ ಪರಿಚಯ ಇದ್ದು, ಇಬ್ಬರು ಸ್ನೇಹಿತರು ಮತ್ತು ವಿಶ್ವಾಸಿಕರು ಎಂದರೆ ಸರಿಯಲ್ಲ. ಆ ರೀತಿ ಪರಿಚಯ ಇದ್ದ ಕಾರಣ ನೀವು ನಿಮ್ಮ ಪ್ರಾಪಂಚಿಕ ಅಡಚಣೆಗಾಗಿ ಏಪ್ರಿಲ್ -2023 ರಲ್ಲಿ ಭೇಟಿಯಾಗಿ ಪಿರ್ಯಾದಿದಾರನಿಗೆ ಹಣ ಕೇಳಿದಿರಿ ಎಂದರೆ ಸರಿಯಲ್ಲ. ನಿಮ್ಮ ಮೇಲಿನ ವಿಶ್ವಾಸದಿಂದ ಪಿರ್ಯಾದಿದಾರ ದಿ:15.04.2023 ರಂದು ನಿಮಗೆ 3 ಲಕ್ಷ ರೂಪಾಯಿ ನೀಡಿದರು ಎಂದರೆ ಸರಿಯಲ್ಲ. ಸದರಿ ಮೊತ್ತವನ್ನು 3 ತಿಂಗಳಲ್ಲಿ ಮರುಪಾವತಿ ಮಾಡುವುದಾಗಿ ತಿಳಿಸಿದ್ದೀರಿ ಎಂದರೆ ಸರಿಯಲ್ಲ. ನೀವು ಪಿರ್ಯಾದಿದಾರ ಹಣ ಮರುಪಾವತಿಗಾಗಿ ಕೇಳಿದಾಗ ನೀಡುವುದನ್ನು ಮುಂದೆ ಹಾಕುತ್ತಾ ಬಂದು, ದಿ:31.07.2023 ನಿಪಿ-1 ಚೆಕ್ಕನ್ನು ನೀಡಿದಿರಿ ಎಂದರೆ ಸರಿಯಲ್ಲ. ಸದರಿ ಚೆಕ ನಗದೀಕರಣಕ್ಕೆ ಹಾಜರಪಡಿಸಿದಾಗ ಖಾತೆ ಬಂದ ಆಗಿದೆ ಎಂದು ಸದರಿ ಚೆಕ ಹಿಂದಿರುಗಿ ಬಂದಿತು ಎಂದರೆ ನನಗೆ ಗೊತ್ತಿಲ್ಲ. ಪಿರ್ಯಾದಿದಾರ ನಿಮಗೆ ತದನಂತರ ಮೌಖಿಕವಾಗಿ ಹಣ ಮರುಪಾವತಿ ಮಾಡುವಂತೆ ಕೇಳಿಕೊಂಡ ಎಂದರೆ ಸರಿಯಲ್ಲ. ದಿ:24.08.2023 ರಂದು ಪಿರ್ಯಾದಿದಾರ ನಿಮಗೆ ನೋಟಿಸ್ ನೀಡಿದ ಎಂದರೆ ನೋಟಿಸ್ ಬಂದಿದೆ ಎಂದು ಹೇಳುತ್ತಾರೆ. ಸದರಿ ನೋಟಿಸಗೆ ನೀವು ಉತ್ತರ ನೀಡಿದ್ದೀರಾ ಎಂದರೆ ನೀಡಿದ್ದೇನೆ ಎಂದು ಸಾಕ್ಷಿ ಹೇಳುತ್ತಾರೆ. ನೀವು ನೀಡಿದ ಉತ್ತರದಲ್ಲಿ ಬರೆದ ವಿಷಯ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನೀವು ನೀಡಿದ ಉತ್ತರದಲ್ಲಿ ನಮೂದಿಸಿದ ವಿಷಯ ಸುಳ್ಳಿನಿಂದ ಕೂಡಿದ್ದು, ನೀವು ಕಟ್ಟುಕಥೆ ಬರೆದು ಉತ್ತರ ನೀಡಿದ್ದೀರಿ ಎಂದರೆ ಸರಿಯಲ್ಲ.

2. ಲಕ್ಷ್ಮಣ ಕುಲಗೋಡ ಅವರಿಗೆ ನಿಮ್ಮ ಪ್ರಕಾರ ನೀವು ಯಾವ ಕಾರಣಕ್ಕಾಗಿ ಚೆಕ ನೀಡಿದಿರಿ ಎಂದರೆ ಸಾಕ್ಷಿಯು ಅವರ ಪಲ್ಸ ಏಜೆಂಟ್ ಕಂಪನಿ ಇನ್ಶೂರೆನ್ಸ ಏಜೆಂಟ ಆಗಿದ್ದು ನನಗೆ ತೊಂದರೆ ನೀಡಿ ಸದರಿ ಚೆಕ ಪಡೆದಿದ್ದಾರೆ ಎಂದು ಹೇಳುತ್ತಾರೆ. ಯಾರು ನಿಮಗೆ ತೊಂದರೆ ನೀಡಿದರು ಎಂದರೆ

ಹಿರಿಯರು ತೊಂದರೆ ನೀಡಿದರು ಎಂದು ಹೇಳುತ್ತಾರೆ. ನೀವು ಆ ರೀತಿ ನಿಮ್ಮ ಪ್ರಕಾರ ತೊಂದರೆ ನೀಡಿ ಚೆಕ ಪಡೆದಿದ್ದಾರೆ ಎಂದು ದೂರು ನೀಡಿದಿರಾ ಎಂದರೆ ದೂರು ನೀಡಿಲ್ಲ, ಕೇವಲ ಭದ್ರತೆಗಾಗಿ ಚೆಕ ಪಡೆದರು ಎಂದು ಹೇಳುತ್ತಾರೆ. ಯಾವ ನಂಬರ ಚೆಕ್ಕನ್ನು ಭದ್ರತೆಗಾಗಿ ನಿಮ್ಮ ಪ್ರಕಾರ ನೀಡಿದಿರಿ ಎಂದರೆ ನಂಬರ ನೆನಪಿಲ್ಲ ಎಂದು ಹೇಳುತ್ತಾರೆ. ಯಾವ ದಿನಾಂಕದಂದು ಸದರಿ ಚೆಕ್ಕನ್ನು ನೀಡಿದಿರಿ ಎಂದರೆ ಸಾಕ್ಷಿಯು 2010 ರಲ್ಲಿ ನೀಡಿದ್ದು, ದಿನಾಂಕ ನಿಖರವಾಗಿ ಹೇಳಲು ಬರುವುದಿಲ್ಲ ಎಂದು ಹೇಳುತ್ತಾರೆ. ಈ ಪ್ರಕರಣದಲ್ಲಿ ಫಿರ್ಯಾದಿದಾರ ನೀಡಿದ ನೋಟಿಸ್ ಬಂದ ನಂತರ ಲಕ್ಷ್ಮಣ ಕುಲಗೋಡ ಅವರನ್ನು ಭೇಟಿಯಾಗಿ ವಿಚಾರಣೆ ಮಾಡಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಅವರಿಗೆ ವಿಚಾರಣೆ ಮಾಡಲು ಏನಾದರೂ ತೊಂದರೆ ಇತ್ತಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನಿಮ್ಮ ಪ್ರಕಾರ ಭದ್ರತಗಾಗಿ ನೀಡಿದ ಚೆಕ್ಕನ್ನು ಹಿಂದಿರುಗಿಸಬೇಕು ಎಂದು ಲಕ್ಷ್ಮಣ ಕುಲಗೋಡ ಅವರಿಗೆ ನೀವು ಕೇಳಿದಿರಾ ಅಥವಾ ನೋಟಿಸ್ ನೀಡಿದಿರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಸದರಿ ಲಕ್ಷ್ಮಣ ಕುಲಗೋಡ ಅವರ ವಿರುದ್ದ ಯಾವುದೇ ಕಾನೂನು ಕ್ರಮ ಕೈಗೊಂಡಿಲ್ಲ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಕಾನೂನು ಕ್ರಮ ಕೈಗೊಳ್ಳಲು ಯಾವುದಾದರೂ ತೊಂದರೆ ಇತ್ತಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನೀವು ಫಿರ್ಯಾದಿದಾರನಿಗೆ ನೀಡಬೇಕಾದ ಮೊತ್ತಕ್ಕೆ ಸಂಬಂಧಿಸಿದಂತೆ ನಿಪಿ-1 ಚೆಕ್ಕನ್ನು ನೀಡಿದ್ದರಿಂದ ಲಕ್ಷ್ಮಣ ಕುಲಗೋಡ ಅವರ ವಿರುದ್ದ ಯಾವುದೇ ಕ್ರಮ ಕೈಗೊಂಡಿಲ್ಲ ಎಂದರೆ ಸರಿಯಲ್ಲ. ನಿಮ್ಮ ಪ್ರಕಾರ ಲಕ್ಷ್ಮಣ ಕುಲಗೋಡ ಇವರಿಗೆ ಚೆಕ ನೀಡಿದ್ದೀರಿ ಎಂದು ತೋರಿಸಲು ಯಾವುದಾದರೂ ದಾಖಲಾತಿ ಹಾಜರಪಡಿಸಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನಿಮ್ಮ ಪ್ರಕಾರ ಚೆಕ ದುರುಪಯೋಗ ಆಗಿದೆ ಎಂದು ಪೊಲೀಸ ಠಾಣೆಯಲ್ಲಿ ಆಥವಾ ಬ್ಯಾಂಕಿನಲ್ಲಿ ಯಾವುದಾದರೂ ದೂರು ಸಲ್ಲಿಸಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನಿಮ್ಮ ಫಿರ್ಯಾದಿದಾರನ ನಡುವೆ ವ್ಯವಹಾರ ಆಗಿದ್ದರೂ ಕೂಡಾ ಹಣ ಕೊಡುವುದನ್ನು ತಪ್ಪಿಸಿಕೊಳ್ಳಲು ಆತನ ಪರಿಚಯ ಇಲ್ಲ ಮತ್ತು ಯಾವುದೇ ವ್ಯವಹಾರ ಆಗಿಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಫಿರ್ಯಾದಿದಾರನಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಫಿರ್ಯಾದಿದಾರ ಮತ್ತು ಲಕ್ಷ್ಮಣ ಕುಲಗೋಡ ಇವರು ಪರಿಚಯಸ್ಥರಲ್ಲ ಎಂದರೆ ಸರಿಯಲ್ಲ. ಅವರಿಬ್ಬರು ಶಾಮೀಲಾಗಿ ಸುಳ್ಳು ಪ್ರಕರಣ ಸಲ್ಲಿಸಿದ್ದಾರೆ ಎಂದು ನೀವು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

3. ನೀವು 5 ದಾಖಲಾತಿಗಳನ್ನು ಈ ಪ್ರಕರಣದಲ್ಲಿ ಹಾಜರಪಡಿಸಿದ್ದು ಏತಕ್ಕಾಗಿ ಹಾಜರಪಡಿಸಿದ್ದೀರಿ ಎಂದರೆ ಕೈಗಡ ಸಾಲ ತೆಗೆದುಕೊಂಡಿಲ್ಲ ಪರಿಚಯ ಇಲ್ಲ ಎಂದು ತೋರಿಸಲು ಹಾಜರಪಡಿಸಿದ್ದೇನೆ ಎಂದು ಹೇಳುತ್ತಾರೆ. ನಿಮ್ಮ ವಿರುದ್ದ ಎಷ್ಟು ಎನ್.ಐ ಆ್ಯಕ್ಟ ಪ್ರಕರಣಗಳು ಇವೆ ಎಂದರೆ ಬೇರೆ ಯಾವವು ಇಲ್ಲ ಎಂದು ಹೇಳುತ್ತಾರೆ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಅದೆ.

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ